## **1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
## **ಕೊಡಗು-ಮಡಿಕೇರಿ**

**ಎಸ್.ಸಿ ಸಂಖ್ಯೆಃ 78/2023**

ಪ್ರಾಸಾಃ14
ಚಾಸಾ-24

ಸಾಕ್ಷಿದಾರರ ಹೆಸರು : ಎಸ್.ಪರಶಿವಮೂರ್ತಿ

ತಂದೆಯ ಹೆಸರು : ಪಿ.ಶಿವಣ್ಣ

ವಯಸ್ಸು : 55 ವರ್ಷ

ವೃತ್ತಿ : ಡಿವೈಎಸ್,ಪಿ CEN ಪೊಲೀಸ್ ಠಾಣೆ, ಹಾಸನ

ವಾಸ : ಹಾಸನ ಜಿಲ್ಲೆ.

ಸಾಕ್ಷಿಯನ್ನು ದಿನಾಂಕ **17-07-2025** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

1. ನಾನು ದಿನಾಂಕ 04-06-2021 ರಿಂದ ದಿನಾಂಕ 31-01-2023 ಹಾಗೂ ದಿನಾಂಕ 16-06-2023 ರಿಂದ ದಿನಾಂಕ 03-08-2023 ರವರೆಗೆ ಶನಿವಾರಸಂತೆ ಪೊಲೀಸ್ ಠಾಣೆಯಲ್ಲಿ ಪಿ.ಐ ಆಗಿ ಕರ್ತವ್ಯ ನಿರ್ವಹಿಸಿದ್ದೆ.

2. ನಾನು ಈ ಕಡತವನ್ನು ದಿನಾಂಕ 23-07-2022 ರಂದು ಪ್ರಾಸಾ-13 ರವರಿಂದ ಕಡತವನ್ನು ಪಡೆದುಕೊಂಡು ಆವರೆಗೆ ಆದ ತನಿಖೆಯ ಬಗ್ಗೆ ಪರಿಶೀಲನೆ ಮಾಡಿದೆನು. ಅದೇ ದಿನ ಕೃತ್ಯ ನಡೆದ ಸ್ಥಳವಾದ ನಾಕಲಗೂಡು ಗ್ರಾಮದ ಶನಿವಾರಸಂತೆ ಕಣಗಾಲು ರಸ್ತೆಯ ಪಕ್ಕದಲ್ಲಿ ಹೊಸದಾಗಿ ನಿರ್ಮಾಣ ಮಾಡುತ್ತಿರುವ ಮನೆಯ ಮುಂದೆ ಚಾಸಾ-1 ರವರು ಘಟನಾ ಸ್ಥಳವನ್ನು ತೋರಿಸಿದ ಮೇರೆಗೆ ಪಂಚರಾದ ಪ್ರಾಸಾ-2 ಮತ್ತು ಪ್ರಾಸಾ-3 ರವರ ಸಮಕ್ಷಮ ಮಧ್ಯಾಹ್ನ 1.30 ಗಂಟೆಯಿಂದ 2.30 ಗಂಟೆಯವರೆಗೆ ನಿಪಿ-1 ರಂತೆ ಪಂಚನಾಮ ಕ್ರಮವನ್ನು ಜರುಗಿಸಿದೆನು. ಆ ಸಂದರ್ಭ ನಿಪಿ-2 ರಂತೆ ಘಟನಾ ಸ್ಥಳದ ನಕಾಶೆಯನ್ನು ತಯಾರಿಸಿಕೊಂಡಿದ್ದೆನು. ನಿಪಿ-1 ಮತ್ತು

ನಿಪಿ-2 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಗಳನ್ನು ನಿಪಿ-1(ಸಿ) ಮತ್ತು ನಿಪಿ-2(ಸಿ) ಎಂದು ಗುರುತಿಸಲಾಯಿತು. ನಿಪಿ-1 ರ ಸಮಯದಲ್ಲಿ ನಿಪಿ-3 ರಂತೆ ಎರಡು ಫೋಟೊಗಳನ್ನು ತೆಗೆಯಲಾಗಿರುತ್ತದೆ.

3. ನಂತರ ಅದೇ ದಿನ ಪ್ರಾಸಾ-1, ಪ್ರಾಸಾ-2, ಪ್ರಾಸಾ-6 ಮತ್ತು ಚಾಸಾ-18 ರವರ ಹೇಳಿಕೆಗಳನ್ನು ಪಡೆದೆನು. ಪ್ರಾಸಾ-2 ರವರು ನಿಪಿ-6 ರಂತೆ ನನ್ನ ಮುಂದೆ ಹೇಳಿಕೆಯನ್ನು ನೀಡಿರುತ್ತಾರೆ. ನಂತರ ಈ ಪ್ರಕರಣದ ಆರೋಪಿಗಳ ಪತ್ತೆಗಾಗಿ ಸಿಬ್ಬಂದಿಗಳನ್ನು ನೇಮಿಸಿದೆನು.

4. ದಿನಾಂಕ 04-08-2022 ರಂದು ಅಪರಾಧ ಪ್ರಕ್ರಿಯೆ ಸಂಹಿತೆಯ ಕಲಂ 164 ರಡಿ ಚಾಸಾ-1 ರವರ ಹೇಳಿಕೆಯನ್ನು ದಾಖಲಿಸಲು ಕೋರಿ ಸೋಮವಾರಪೇಟೆಯ ಮಾನ್ಯ ಜೆ.ಎಂ.ಎಫ್.ಸಿ ನ್ಯಾಯಾಲಯಕ್ಕೆ ಸಿಬ್ಬಂದಿಯ ಮೂಲಕ ಮನವಿಯನ್ನು ಸಲ್ಲಿಸಿದೆನು.

5. ದಿನಾಂಕ 05-08-2022 ರಂದು ಸೋಮವಾರಪೇಟೆಯ ಮಾನ್ಯ ಜೆ.ಎಂ.ಎಫ್.ಸಿ ನ್ಯಾಯಾಲಯಕ್ಕೆ ಚಾಸಾ-17 ರವರೊಂದಿಗೆ ಚಾಸಾ-1 ರವರನ್ನು ಕಳುಹಿಸಿಕೊಟ್ಟಿದ್ದು, ಸದರಿ ದಿನ ಸದರಿ ನ್ಯಾಯಾಲಯದಲ್ಲಿ ಚಾಸಾ-1 ರವರ ಹೇಳಿಕೆಯನ್ನು ಅಪರಾಧ ಪ್ರಕ್ರಿಯೆ ಸಂಹಿತೆಯ ಕಲಂ 164 ರಡಿ ದಾಖಲಿಸಲಾಗಿತ್ತು. ಅದೇ ದಿನ ಚಾಸಾ-17 ರವರು ಠಾಣೆಗೆ ಹಿಂತಿರುಗಿ ನೀಡಿದ ಅಪರಾಧ ಪ್ರಕ್ರಿಯೆ ಸಂಹಿತೆಯ ಕಲಂ 164 ರಡಿ ದಾಖಲಿಸಿದ ಚಾಸಾ-1 ರವರ ಹೇಳಿಕೆಯ ಪ್ರತಿಯನ್ನು ಪಡೆದು ಕಡತಕ್ಕೆ ಅಳವಡಿಸಿದೆನು. ಸದರಿ ಅಪರಾಧ ಪ್ರಕ್ರಿಯೆ ಸಂಹಿತೆಯ ಕಲಂ 164 ರಡಿ ದಾಖಲಿಸಿದ ಚಾಸಾ-1 ರವರ ಹೇಳಿಕೆಯನ್ನು ನಾನು ಈಗ ನೋಡುತ್ತಿದ್ದು, ಸಾಕ್ಷಿ ಗುರುತಿಸಿದ ಸದರಿ ಹೇಳಿಕೆಯನ್ನು ಆರೋಪಿತರ ಪರ ವಕೀಲರುಗಳ ತಕರಾರಿಗೆ ಒಳಪಟ್ಟು ನಿಪಿ-23 ಎಂದು ಗುರುತಿಸಲಾಯಿತು. (ಸೀಲ್ಡ್ ಕವರ್ ನಲ್ಲಿ ಇದ್ದ ನಿಪಿ-23 ನ್ನು ವಿಶೇಷ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ತೆರೆದು ಗುರುತಿಸಲಾಯಿತು). ಅದೇ ದಿನ ಚಾಸಾ-17 ರವರ ಹೇಳಿಕೆಯನ್ನು ಪಡೆದೆನು.

6. ದಿನಾಂಕ 09-08-2022 ರಂದು ಕೃತ್ಯ ನಡೆದ ಸ್ಥಳದ ಜಾಗದ ಬಗ್ಗೆ ಮಾಹಿತಿ ಕೋರಿ

ಪ್ರಾಸಾ-10 ರವರಿಗೆ ಕೋರಿಕೆ ಪತ್ರವನ್ನು ನಿಪಿ-14 ರಂತೆ ಸಿಬ್ಬಂದಿ ಮೂಲಕ ಕಳುಹಿಸಿಕೊಟ್ಟೆನು. ನಿಪಿ-14 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿ ಪ್ರಾಸಾ-12 ರವರಿಗೆ ಕೋರಿಕೆ ಪತ್ರವನ್ನು ಸಿಬ್ಬಂದಿ ಮೂಲಕ ಕಳುಹಿಸಿಕೊಟ್ಟೆನು.

7. ದಿನಾಂಕ 13-08-2022 ರಂದು ಪ್ರಾಸಾ-10 ರವರು ನಿಪಿ-15 ರಂತೆ ನೀಡಿರುವ ದೃಢೀಕರಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿದೆನು. ನಿಪಿ-15 ರಲ್ಲಿ ದಿಶಾಂಕ್ ಆಪ್ ಮೂಲಕ ನಾಕಲಗೂಡು ಗ್ರಾಮದ ಮುಖ್ಯ ರಸ್ತೆಯ ಪಕ್ಕ ನಿರ್ಮಿಸಿರುವ ಶೀಟ್ ಮನೆಯ ಜಾಗವನ್ನು ಪರಿಶೀಲಿಸಲಾಗಿ ಅದು ಸರ್ವೆ ನಂಬರ್ 38/1 ಎಂದು ತೋರಿಸುತಿದ್ದು, ಸದರಿ ಜಾಗವು ಸರ್ಕಾರದಿಂದ ಹೆಸರಿನಲ್ಲಿ ಇರುತ್ತದೆ ಮತ್ತು ಸದರಿ ಜಾಗದಲ್ಲಿ ಪ್ರಾಸಾ-5 ರವರು ಶೀಟಿನ ಮನೆ ನಿರ್ಮಿಸಿರುತ್ತಾರೆ ಮತ್ತು ಸದರಿ ಜಾಗಕ್ಕೆ ಸಂಬಂಧಪಟ್ಟಂತೆ ಪ್ರಾಸಾ-5 ರವರು ನಮೂನೆ-57 ರಲ್ಲಿ ಅರ್ಜಿ ಸಲ್ಲಿಸಿರುತ್ತಾರೆ ಎಂದು ನಮೂದಿಸಲಾಗಿರುತ್ತದೆ. ನಿಪಿ-15 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-15(ಬಿ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಚಾಸಾ-1 ರವರು ಕೃತ್ಯ ನಡೆದ ಸ್ಥಳದ ಮನೆಯ ಬಾಗಿಲನ್ನು ಕಂದಾಯ ಇಲಾಖೆಗೆ ತಿಳಿಸಿ ತೆರೆಸಿರುವುದಾಗಿ ತಿಳಿಸಿದಂತೆ ಕೃತ್ಯ ನಡೆದ ಸ್ಥಳಕ್ಕೆ ನಾನು ಸಿಬ್ಬಂದಿಯ ಜೊತೆ ಹೋಗಿದ್ದು, ಅಲ್ಲಿ ಚಾಸಾ-1 ರವರು ಹಾಜರಿದ್ದು, ತನಗೆ ಹಲ್ಲೆ ಮಾಡಿದ ದೊಣ್ಣೆಯನ್ನು ತೋರಿಸಿಕೊಡುವುದಾಗಿ ತಿಳಿಸಿದ ಮೇರೆಗೆ ಸ್ಥಳಕ್ಕೆ ಪಂಚರಾದ ಪ್ರಾಸಾ-2 ಮತ್ತು ಪ್ರಾಸಾ-7 ರವರನ್ನು ಬರಮಾಡಿಕೊಂಡು ಅವರಿಗೆ ವಿಚಾರವನ್ನು ತಿಳಿಸಿ ಅವರು ಒಪ್ಪಿದ ನಂತರ ಮಧ್ಯಾಹ್ನ 2.00 ಗಂಟೆಯಿಂದ 3.00 ಗಂಟೆಯವರೆಗೆ ನಿಪಿ-4 ರಂತೆ ಪಂಚನಾಮ ಕ್ರಮವನ್ನು ಜರುಗಿಸಿ, ಆ ಸಮಯದಲ್ಲಿ ಚಾಸಾ-1 ರವರು ಮನೆಯ ಒಳಗಡೆ ಗೋಡೆಯ ಪಕ್ಕ ಒಣಗಿದ ಕಾಫಿ ಗಿಡದ ದೊಣ್ಣೆಯನ್ನು ತೋರಿಸಿ ಹಾಜರು ಮಾಡಿದ ಮೇರೆಗೆ ಅದನ್ನು ವಶಕ್ಕೆ ಪಡೆದೆನು. ಅದಕ್ಕೆ ನನ್ನ ಮತ್ತು ಪಂಚರ ಸಹಿಗಳುಳ್ಳ ಚೀಟಿಗಳನ್ನು ಅಂಟಿಸಿದೆನು. ನಿಪಿ-4 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-4(ಸಿ) ಎಂದು ಗುರುತಿಸಲಾಯಿತು.

ಈಗ ನಾನು ನ್ಯಾಯಾಲಯದ ಮುಂದೆ ನೋಡುತ್ತಿರುವ ಮು,ಮಾ-1 ನ್ನು ನಾನು ನಿಪಿ-4 ರಡಿಯಲ್ಲಿ ವಶಪಡಿಸಿಕೊಂಡಿದ್ದೆ. ನಿಪಿ-4 ರ ಸಮಯದಲ್ಲಿ ನಿಪಿ-5 ರಂತೆ 4 ಫೋಟೋಗಳನ್ನು ತೆಗೆಯಲಾಗಿತ್ತು. ಅಮಾನತ್ತುಪಡಿಸಿಕೊಂಡ ಮು.ಮಾ-1 ನ್ನು ತನಿಖೆ ಮುಗಿಯುವರೆಗೆ ನನ್ನ ವಶದಲ್ಲಿ ಇಟ್ಟುಕೊಳ್ಳುವಂತೆ ಅನುಮತಿ ಕೋರಿ ನ್ಯಾಯಾಲಯಕ್ಕೆ ಸ್ವತ್ತುಪಟ್ಟಿಯನ್ನು ಸಲ್ಲಿಸಿದೆನು. ನಂತರ ಫ್ರಾಸಾ-4 ಹಾಗೂ ಫ್ರಾಸಾ-5 ರವರ ಹೇಳಿಕೆಗಳನ್ನು ಪಡೆದೆನು. ಅದೇ ದಿನ ಚಾಸಾ-14 ರವರಿಂದ ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ನಿಪಿ-18 ರಂತೆ ಪಡೆದೆನು. ನಿಪಿ-18 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-18(ಬಿ) ಎಂದು ಗುರುತಿಸಲಾಯಿತು. ಅದೇ ದಿನ 2 ರಿಂದ 7 ನೇ ಆರೋಪಿತರು ಈ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿದ್ದು, ಅವರನ್ನು ವಿಚಾರಣೆ ಮಾಡಿ ನ್ಯಾಯಾಲಯದ ಆದೇಶದಂತೆ ಜಾಮೀನು ಪಡೆದು ಬಿಡುಗಡೆ ಮಾಡಿದೆನು.

8. ದಿನಾಂಕ 14-08-2022 ರಂದು ನಿಪಿ-1 ಮತ್ತು ನಿಪಿ-4 ರ ಮಹಜರ್ ಸಮಯ ಫೋಟೋಗಳನ್ನು ತೆಗೆದ ಬಗ್ಗೆ ಭಾರತೀಯ ಸಾಕ್ಷ್ಯಾಧಿನಿಯಮದ ಕಲಂ 65(ಬಿ) ರಡಿ ದೃಢೀಕರಣ ಪತ್ರವನ್ನು ನಾನು ತಯಾರಿಸಿ ಕಡತಕ್ಕೆ ಅಳವಡಿಸಿದೆನು. ಸಾಕ್ಷಿ ಗುರುತಿಸಿದ ಭಾರತೀಯ ಸಾಕ್ಷ್ಯಾಧಿನಿಯಮದ ಕಲಂ 65(ಬಿ) ರಡಿ ನೀಡಲಾದ ದೃಢೀಕರಣ ಪತ್ರವನ್ನು ನಿಪಿ-24 ಎಂದು, ನಿಪಿ-24 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-24(ಎ) ಎಂದು ಗುರುತಿಸಲಾಯಿತು.

9. ದಿನಾಂಕ 16-08-2022 ರಂದು ಚಾಸಾ-1 ರವರು ವಾಸವಿದ್ದ ಮನೆಯ ದೃಢೀಕರಣ ಪತ್ರವನ್ನು ನೀಡುವಂತೆ ಕೋರಿ ಫ್ರಾಸಾ-9 ರವರಿಗೆ ಕೋರಿಕೆ ಪತ್ರವನ್ನು ಸಿಬ್ಬಂದಿ ಮೂಲಕ ಕಳುಹಿಸಿಕೊಟ್ಟೆನು.

10. ದಿನಾಂಕ 22-08-2022 ರಂದು ಕೃತ್ಯ ನಡೆದ ಸ್ಥಳದ ನಕಾಶೆಯನ್ನು ತಯಾರಿಸುವಂತೆ ಕೋರಿ ಚಾಸಾ-15 ರವರಿಗೆ ಕೋರಿಕೆ ಪತ್ರವನ್ನು ಸಿಬ್ಬಂದಿ ಮೂಲಕ ಕಳುಹಿಸಿಕೊಟ್ಟೆನು. ಸದರಿ ಕೋರಿಕೆ ಪತ್ರವನ್ನು ನಾನು ಈಗ ನೋಡುತ್ತಿದ್ದು, ಸಾಕ್ಷಿ ಗುರುತಿಸಿದ ಕೋರಿಕೆ ಪತ್ರವನ್ನು ನಿಪಿ-25

ಎಂದು, ನಿಪಿ-25 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-25(ಎ) ಎಂದು ಗುರುತಿಸಲಾಯಿತು.

11. ದಿನಾಂಕ 05-09-2022 ರಂದು ಫ್ರಾಸಾ-9 ರವರಿಂದ ಕೃತ್ಯ ನಡೆದ ಸ್ಥಳದಲ್ಲಿ ಮನೆ ಇರುವ ಬಗ್ಗೆ ನೀಡಿದ ನಿಪಿ-13 ದೃಢೀಕರಣ ಪತ್ರವನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿದೆನು. ನಿಪಿ-13 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-13(ಬಿ) ಎಂದು ಗುರುತಿಸಲಾಯಿತು.

12. ದಿನಾಂಕ 15-09-2022 ರಂದು ಚಾಸಾ-15 ರವರಿಂದ ಕೃತ್ಯ ನಡೆದ ನಕಾಶೆಯನ್ನು ಸ್ವೀಕರಿಸಿದೆನು. ಸದರಿ ನಕಾಶೆಯನ್ನು ನಾನು ಈಗ ನೋಡುತ್ತಿದ್ದು, ಸಾಕ್ಷಿ ಗುರುತಿಸಿದ ನಕಾಶೆಯನ್ನು ನಿಪಿ-26 ಎಂದು, ನಿಪಿ-26 ರ ಕವರಿಂಗ್ ಲೆಟರ್ ನ್ನು ನಿಪಿ-27 ಎಂದು, ನಿಪಿ-27 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-27(ಎ) ಎಂದು ಗುರುತಿಸಲಾಯಿತು.

13. ದಿನಾಂಕ 31-01-2023 ರಂದು ನನಗೆ ಸಾರ್ವತ್ರಿಕ ಚುನಾವಣೆ ನಿಮಿತ್ತ ವರ್ಗಾವಣೆ ಆಗಿದ್ದ ಕಾರಣ ಈ ಪ್ರಕರಣದ ಕಡತವನ್ನು ಮುಂದಿನ ತನಿಖೆ ಬಾಬ್ತು ಫ್ರಾಸಾ-13 ರವರಿಗೆ ನೀಡಿದೆನು.

14. ದಿನಾಂಕ 16-06-2023 ರಂದು ಚುನಾವಣಾ ಕರ್ತವ್ಯ ಮುಗಿದಿದ್ದರಿಂದ ಪುನಃ ಶನಿವಾರಸಂತೆ ಠಾಣೆಗೆ ವರ್ಗಾವಣೆ ಆಗಿ ಬಂದು ಫ್ರಾಸಾ-13 ರವರಿಂದ ಈ ಪ್ರಕರಣದ ಕಡತವನ್ನು ಪುನಃ ಮುಂದಿನ ತನಿಖೆಯ ಬಾಬ್ತು ಪಡೆದು ತನಿಖೆಯನ್ನು ಮುಂದುವರೆಸಿದೆನು.

15. ದಿನಾಂಕ 01-07-2023 ರಂದು 3 ನೇ ಆರೋಪಿ ನಾಗಯ್ಯ ರವರ ಹೆಸರಿನಲ್ಲಿ ಕಣಗಾಲು ಗ್ರಾಮದಲ್ಲಿ ವಾಸದ ಮನೆ ಇರುವ ಬಗ್ಗೆ ದೃಢೀಕರಣ ಪತ್ರ ಕೊಡುವಂತೆ ಕೋರಿ ಚಾಸಾ-11 ರವರಿಗೆ ಕೋರಿಕೆ ಪತ್ರವನ್ನು ನಿಪಿ-16 ರಂತೆ ಸಿಬ್ಬಂದಿ ಮೂಲಕ ಕಳುಹಿಸಿಕೊಟ್ಟೆನು. ನಿಪಿ-16 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು.

16. ದಿನಾಂಕ 11-07-2023 ರಂದು ಫ್ರಾಸಾ-9 ರವರು 3 ನೇ ಆರೋಪಿಯ ಹೆಸರಿನಲ್ಲಿ ಕಣಗಾಲು ಗ್ರಾಮದಲ್ಲಿ ಮನೆ ಇರುವ ಬಗ್ಗೆ ನಿಪಿ-17 ರಂತೆ ನೀಡಿದ ದೃಢೀಕರಣ ಪತ್ರವನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿದೆನು. ನಿಪಿ-17 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-17(ಬಿ) ಎಂದು ಗುರುತಿಸಲಾಯಿತು.

17. ದಿನಾಂಕ 12-07-2023 ರಂದು ಈ ಪ್ರಕರಣದ ತನಿಖೆಯನ್ನು ಪೂರೈಸಿ ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದೆನು. ಈ ಪ್ರಕರಣದ 1 ರಿಂದ 7 ನೇ ಆರೋಪಿತರನ್ನು ನೋಡಿದರೆ ನಾನು ಗುರುತಿಸಿರುತ್ತೇನೆ. ನ್ಯಾಯಾಲಯದಲ್ಲಿ ಹಾಜರಿರುವ 1 ರಿಂದ 4 ಮತ್ತು 6 ಮತ್ತು 7 ನೇ ಆರೋಪಿತರನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. 5 ನೇ ಆರೋಪಿ ಈ ದಿನ ಗೈರು ಹಾಜರಿದ್ದು, 5 ನೇ ಆರೋಪಿಯನ್ನು ಗುರುತಿಸುವ ಬಗ್ಗೆ ತಕರಾರು ಇಲ್ಲ ಎಂದು 5 ನೇ ಆರೋಪಿ ಪರ ವಕೀಲರು ನಿವೇದಿಸಿರುತ್ತಾರೆ.

<u>ಪಾಟೀಸವಾಲು- **6** ಮತ್ತು **7** ನೇ ಆರೋಪಿತರ ಪರ ಶ್ರೀ ಡಿ.ಡಿ.ಸಿ ವಕೀಲರಿಂದಃ</u>

18. ದಿನಾಂಕ 18-07-2022 ರಿಂದ ದಿನಾಂಕ 22-07-2022 ರ ಮಧ್ಯೆ ವಿವಾದಿತ ಜಾಗದ ಬಗ್ಗೆ ಗಲಾಟೆ ಆಗಿತ್ತು ಎಂಬ ಬಗ್ಗೆ ಯಾವುದಾದರೂ ದೂರು ದಾಖಲಾಗಿತ್ತೋ ಎಂದರೆ ಸಾಕ್ಷಿ 1 ನೇ ಆರೋಪಿ ಮತ್ತು ಫ್ರಾಸಾ-4 ರವರ ನಡುವೆ ಸದರಿ ಮನೆಯ ಬಗ್ಗೆ ವಿವಾದ ಇದ್ದ ಕುರಿತಾಗಿ LPTN No.292/2022 ಮತ್ತು LPTN No.293/2022 ರಂತೆ ದೂರು ಅರ್ಜಿಗಳು ದಾಖಲಾಗಿದ್ದವು ಎನ್ನುತ್ತಾರೆ. ಸದರಿ LPTN No.292/2022 ಮತ್ತು LPTN No.293/2022 ಗಳು ಯಾವಾಗ ದಾಖಲಾಗಿದ್ದವು ಎಂದು ನನಗೆ ಈಗ ನೆನಪಿಲ್ಲ. ನಾನು ದಿನಾಂಕ 23-07-2022 ರಂದು ಕೃತ್ಯ ನಡೆಯಿತು ಎನ್ನಲಾದ ಸ್ಥಳಕ್ಕೆ ಹೋಗುವ ಮುಂಚೆ ಸದರಿ LPTN No.292/2022 ಮತ್ತು LPTN No.293/2022 ಗಳ ದೂರಗಳನ್ನು ನೋಡಿರಲಿಲ್ಲ ಆದರೆ ಆ ಬಗ್ಗೆ ನನಗೆ ಮಾಹಿತಿ ಇತ್ತು.

19. ದಿನಾಂಕ 23-07-2022 ರಂದು ನಾನು ಕೃತ್ಯ ನಡೆದ ಸ್ಥಳಕ್ಕೆ ಹೋದಾಗ ಸ್ಥಳದಲ್ಲಿ ಯಾರು ಯಾರು ಇದ್ದರು ಎಂದರೆ ಸಾಕ್ಷಿ ಚಾಸಾ-1 ರವರು ಇದ್ದರು ಎನ್ನುತ್ತಾರೆ. ದಿನಾಂಕ 18-

07-2022 ರಿಂದ ದಿನಾಂಕ 22-07-2022 ರ ತನಕ ಶನಿವಾರಸಂತೆ ಪೊಲೀಸ್ ಠಾಣೆಗೆ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ MLC ವರದಿ ಬಂದ ಬಗ್ಗೆ ದಾಖಲೆಗಳನ್ನು ಕಡತದಲ್ಲಿ ನೋಡಿದ್ದೀರಾ ಎಂದರೆ ಸಾಕ್ಷಿ ಆ ಬಗ್ಗೆ ಈಗ ನನಗೆ ನೆನಪಿಲ್ಲ ಎನ್ನುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ತದನಂತರ ನಾನು MLC ವರದಿಯನ್ನು ಪಡೆದುಕೊಂಡಿದ್ದೇನೋ, ಇಲ್ಲವೋ ಎಂದು ನನಗೆ ಈಗ ನೆನಪಿಲ್ಲ.

20. ದಿನಾಂಕ 23-07-2022 ರಂದು ಕೃತ್ಯ ನಡೆಯಿತು ಎನ್ನಲಾದ ಸ್ಥಳಕ್ಕೆ ಹೋಗುವ ಮುಂಚೆ ಸ್ಥಳಕ್ಕೆ ಬರುತ್ತೇನೆ ಎಂದು ಚಾಸಾ-1 ರವರಿಗೆ ಪೂರ್ವ ಮಾಹಿತಿಯನ್ನು ನೀಡಿರಲಿಲ್ಲ. ದಿನಾಂಕ 23-07-2022 ರಂದು ನಾನು ಸ್ಥಳಕ್ಕೆ ತಲುಪಿದಾಗ ಅಂದಾಜು ಮಧ್ಯಾಹ್ನ 1.15 ಗಂಟೆ ಆಗಿತ್ತು. ಪಂಚರನ್ನು ಸಿಬ್ಬಂದಿಯಾದ ಚಾಸಾ-18 ರವರ ಮೂಲಕ ಕರೆಸಿಕೊಂಡಿದ್ದೆ. ಪಂಚರು ಸ್ಥಳಕ್ಕೆ ಬಂದ ನಂತರ ಅವರಿಗೆ ನಾನು ನೋಟಿಸ್ಸನ್ನು ನಾನು ಜಾರಿ ಮಾಡಿದ್ದೆ. ಘಟನೆ ನಡೆಯಿತು ಎನ್ನಲಾದ ಸ್ಥಳದಲ್ಲಿ ಬಿದ್ದಿದ್ದ ಒಡೆದ ಬೀಗವನ್ನು ನಾನು ನೋಡಿರಲಿಲ್ಲ. ದಿನಾಂಕ 23-07-2022 ರಂದು ಕೃತ್ಯ ನಡೆಯಿತು ಎನ್ನಲಾದ ಮನೆಯ ಬಾಗಿಲು ಮುಚ್ಚಿತ್ತು. ಆ ಸಮಯ ಸದರಿ ಮನೆಯ ಎದುರುಗಡೆಯ ಬಾಗಿಲಿಗೆ ಬೀಗ ಹಾಕಲಾಗಿತ್ತು. ಸದರಿ ಮನೆಯ ಬೀಗ ಅಥವಾ ಚಿಲಕ ಅಲ್ಲಿ ಕಾಣುತಿತ್ತೋ ಎಂದರೆ ಸಾಕ್ಷಿ ನನಗೆ ಈಗ ನೆನಪಿಲ್ಲ ಎನ್ನುತ್ತಾರೆ. ಸಾಕ್ಷಿ ಪುನಃ ಸ್ವತಃ ಮುಂದುವರೆದು ಮನೆಯ ಬೀಗ ಲಾಕ್ ಆಗಿತ್ತು ಎನ್ನುತ್ತಾರೆ. ನಾನು ಆ ಸಮಯ ಚಾಸಾ-1 ರವರ ಬಳಿ ಸದರಿ ಮನೆಯ ಕೀ ಯಾರ ಬಳಿ ಇರುತ್ತದೆ ಎಂದು ಕೇಳಿರಲಿಲ್ಲ. ಸಾಕ್ಷಿ ಸ್ವತಃ ಸದರಿ ಮನೆಯ ಬಾಗಿಲಿನ ಮೇಲೆ ಕಂದಾಯ ಇಲಾಖೆಯವರು ಮುಂದಿನ ತೀರ್ಮಾನದವರೆಗೆ ಯಾರು ಸದರಿ ಮನೆಗೆ ಪ್ರವೇಶ ಮಾಡಬಾರದು ಎಂದು ಇರುವ ಚೀಟಿಯನ್ನು ಅಂಟಿಸಿದ್ದರು. ಸದರಿ ಮನೆಯ ಎದುರಿನಿಂದ ನೋಡಲಾಗಿ ಮನೆಯ ಬಾಗಿಲಿನ ಚೌಕಟ್ಟು ಹಾಗೂ ಬಾಗಿಲಿಗೆ ಸೇರಿದಂತೆ ಸದರಿ ಚೀಟಿಯನ್ನು ಅಂಟಿಸಲಾಗಿತ್ತು. ಸದರಿ ಮನೆಗೆ ಯಾರು ಬೀಗ ಹಾಕಿದ್ದರು ಎಂದು ನೀವು ತನಿಖೆಯನ್ನು ಮಾಡಿದ್ದೀರಾ ಎಂದರೆ ಸಾಕ್ಷಿ ನನ್ನ ತನಿಖೆಗೆ ಅದು ಅಗತ್ಯ ಬೀಳದ ಕಾರಣ ನಾನು ಆ ಬಗ್ಗೆ ತನಿಖೆ ಮಾಡಲಿಲ್ಲ ಎನ್ನುತ್ತಾರೆ. ನಿಪಿ-3 ರಲ್ಲಿ ಬಾಗಿಲಿಗೆ ಹಾಕಲಾದ ಬೀಗ ಕಾಣುತ್ತಿದಿಯಾ

ಎಂದರೆ ಸಾಕ್ಷಿ ಬೀಗವನ್ನು ಸೇರಿಸಿ ಕಂದಾಯ ಇಲಾಖೆಯವರು ಚೀಟಿಯನ್ನು ಅಂಟಿಸಿರುವುದು ನಿಪಿ-3 ರಲ್ಲಿ ಕಾಣುತ್ತದೆ ಎನ್ನುತ್ತಾರೆ. ನಿಪಿ-1 ಮಹಜರ್ ನಲ್ಲಿ ಯಾವ ಸಿಸ್ಟಮ್ ನ ಬೀಗವನ್ನು ನಿಪಿ-3 ಫೋಟೊದಲ್ಲಿ ಕಂಡು ಬರುವ ಬಾಗಿಲಿಗೆ ಹಾಕಲಾಗಿತ್ತು ಎಂಬ ಬಗ್ಗೆ ನಮೂದು ಮಾಡಿರುವುದಿಲ್ಲ. ದಿನಾಂಕ 23-07-2022 ರಂದು ನಾನು ಪರಿಶೀಲಿಸಿದಾಗ ನಿಪಿ-3 ಫೋಟೊದಲ್ಲಿ ಕಾಣುವ ಬಾಗಿಲಿಗೆ ಡ್ಯಾಮೇಜ್ ಆದದ್ದು ಕಾಣಿಸುತ್ತಿರಲಿಲ್ಲ, ಸಾಕ್ಷಿ ಸ್ವತಃ ಚೀಟಿ ಅಂಟಿಸಿದ ಕಾರಣ ಅದು ಕಾಣುತ್ತಿರಲಿಲ್ಲ ಎನ್ನುತ್ತಾರೆ.

21. ನಾನು ಮತ್ತು ನನ್ನ ಸಿಬ್ಬಂದಿಗಳು ಇಲಾಖಾ ಜೀಪಿನಲ್ಲಿ ಘಟನೆ ನಡೆಯಿತು ಎನ್ನಲಾದ ಸ್ಥಳಕ್ಕೆ ಮಹಜರ್ ಮಾಡಲು ಹೋಗಿದ್ದೆವು. ಸದರಿ ದಿನ ನಾವು ಹೋಗಿದ್ದ ಜೀಪನ್ನು ಚಲಾಯಿಸಿದ ಚಾಲಕನ ಹೆಸರು ನನಗೆ ಈಗ ನೆನಪಿಲ್ಲ. ನಿಪಿ-1 ಮಹಜರ್ ನಲ್ಲಿ ಇಲಾಖಾ ಜೀಪಿನಲ್ಲಿ ಘಟನಾ ಸ್ಥಳಕ್ಕೆ ಹೋದ ಬಗ್ಗೆ ನಮೂದು ಮಾಡಿರುವುದಿಲ್ಲ, ಸಾಕ್ಷಿ ಸ್ವತಃ ಸದರಿ ದಿನ ಇಲಾಖಾ ಜೀಪಿನಲ್ಲಿ ಹೋದ ಬಗ್ಗೆ ಲಾಗ್ ಬುಕ್ ನಲ್ಲಿ ಇರುತ್ತದೆ ಎನ್ನುತ್ತಾರೆ. ಸದರಿ ಲಾಗ್ ಬುಕ್ಕಿನ ಎಕ್ಸ್ಟ್ರಾಕ್ಟ್ ನ್ನು ದೋಷಾರೋಪಣಾ ಪಟ್ಟಿಯೊಡನೆ ನಾನು ಸಲ್ಲಿಸಿರುವುದಿಲ್ಲ. ನಿಪಿ-1 ನ್ನು ಚಾಸಾ-18 ರವರು ಬರೆದಿದ್ದರು. ನಿಪಿ-1 ನ್ನು ಚಾಸಾ-18 ರವರು ಬರೆದಿರುತ್ತಾರೆ ಎಂಬ ಬಗ್ಗೆ ನಿಪಿ-1 ರಲ್ಲಿ ನಮೂದು ಇರುತ್ತದೆ. ನಿಪಿ-2 ನಕಾಶೆಯನ್ನು ನನ್ನ ನಿರ್ದೇಶನದ ಮೇರೆಗೆ ಚಾಸಾ-18 ರವರು ತಯಾರಿಸಿದ್ದರು. ನಿಪಿ-3 ಫೋಟೊಗಳನ್ನು ತೆಗೆದ ಸಿಬ್ಬಂದಿಯ ಹೆಸರು ನನಗೆ ಈಗ ನೆನಪಿಲ್ಲ. ನಿಪಿ-3 ಫೋಟೊಗಳನ್ನು ಇಲಾಖೆಗೆ ನೀಡಲಾದ ಕ್ಯಾಮರದ ಮೂಲಕ ತೆಗೆಯಲಾಗಿತ್ತು. ಇಲಾಖೆಗೆ ನೀಡಲಾದ ಕ್ಯಾಮರದ ಮೂಲಕ ಫೋಟೊಗಳನ್ನು ತೆಗೆಯಲಾಗಿತ್ತು ಎಂಬ ಬಗ್ಗೆ ನಿಪಿ-1 ಮಹಜರ್ ನಲ್ಲಿ ನಮೂದು ಇರುವುದಿಲ್ಲ.

22. ನಿಪಿ-3 ರಲ್ಲಿ ಕಂಡು ಬರುವ ಮನೆಯ ಬಾಗಿಲಿಗೆ ಅಂಟಿಸಿದ ಕಂದಾಯ ಇಲಾಖೆಯ ಪ್ರಕಟಣೆಯ ದಿನಾಂಕ 21-07-2022 ಆಗಿರುತ್ತದೆ. ನಿಪಿ-1 ರ ಸಮಯದಲ್ಲಿ ಸದರಿ ಬಾಗಿಲಿಗೆ ಅಂತಹ ಎರಡು ಚೀಟಿಗಳನ್ನು ಅಂಟಿಸಲಾಗಿತ್ತು. ಈಗ ನಾನು ನೋಡುತ್ತಿರುವ ಪ್ರಕಟಣೆಯ ಚೀಟಿಯನ್ನು ಬಾಗಿಲಿನ ಮೇಲ್ಭಾಗದಲ್ಲಿ ಅಂಟಿಸಲಾಗಿತ್ತು. ನಿಪಿ-3 ಫೋಟೊದಲ್ಲಿ ಕಾಣುವ

ಮನೆಯ ಬಾಗಿಲಿಗೆ ಕಂದಾಯ ಇಲಾಖೆಯವರು ಎರಡು ಇಲಾಖಾ ಪ್ರಕಟಣೆಯ ಚೀಟಿಗಳನ್ನು ಅಂಟಿಸಿದ್ದು, ಒಂದು ಚೀಟಿಯನ್ನು ಬಾಗಿಲಿನ ಮೇಲ್ಭಾಗದಲ್ಲಿ ಅಂಟಿಸಲಾಗಿತ್ತು, ಇನ್ನೊಂದು ಚೀಟಿಯನ್ನು ಬೀಗದ ಮೇಲ್ಭಾಗದಲ್ಲಿ ಬೀಗ ಕಾಣದ ರೀತಿಯಲ್ಲಿ ಅಂಟಿಸಲಾಗಿರುತ್ತದೆ ಎಂಬ ಬಗ್ಗೆ ನಿಪಿ-1 ರಲ್ಲಿ ನಮೂದಿಸಿರುತ್ತದೆ. ಸದರಿ ಬಾಗಿಲಿನ ಲಾಕಿನ ಮೇಲೆ ಅಂಟಿಸಲಾದ ಕಂದಾಯ ಇಲಾಖೆಯ ಪ್ರಕಟಣೆಯ ಫೋಟೊವನ್ನು ಹತ್ತಿರದಿಂದ ನಾನು ತೆಗೆಸಿರಲಿಲ್ಲ.

23. ದಿನಾಂಕ 13-08-2022 ರಂದು ಕೃತ್ಯ ನಡೆಯಿತು ಎನ್ನಲಾದ ಸ್ಥಳಕ್ಕೆ ಬರಲು ಚಾಸಾ-1 ರವರು ನನ್ನ ಬಳಿ ಕೋರಿಕೊಂಡಿದ್ದರು. ಸದರಿ ದಿನ ಚಾಸಾ-1 ರವರು ಕಂದಾಯ ಇಲಾಖೆಯವರು ಸೀಲ್ ಮಾಡಿದ ಮನೆಯ ಬಾಗಿಲನ್ನು ತೆರೆಯಲು ಅನುಮತಿ ನೀಡಿದ ಬಗ್ಗೆ ದಾಖಲೆಯನ್ನು ನನಗೆ ಕೊಟ್ಟಿರುವುದಿಲ್ಲ. ಯಾವ ದಿನಾಂಕದಂದು ಸೀಲು ಮಾಡಿದ ಸದರಿ ಮನೆಯ ಬಾಗಿಲನ್ನು ಕಂದಾಯ ಇಲಾಖೆಯವರು ತೆರೆದರು ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

24. ದಿನಾಂಕ 13-08-2022 ರಂದು ಕೃತ್ಯ ನಡೆಯಿತು ಎನ್ನಲಾದ ಸ್ಥಳಕ್ಕೆನಾನು ಹೋಗುವಾಗ ನನ್ನ ಜೊತೆ ಚಾಸಾ-19 ರವರು ಇದ್ದರು. ನಾವು ನಮ್ಮ ಇಲಾಖಾ ವಾಹನದಲ್ಲಿ ಅಲ್ಲಿಗೆ ಹೋಗಿದ್ದೆವು. ಸದರಿ ಇಲಾಖಾ ವಾಹನದಲ್ಲಿ ದಿನಾಂಕ 13-08-2022 ರಂದು ಸ್ಥಳಕ್ಕೆ ಹೋದ ಬಗ್ಗೆ ನಿಪಿ-4 ಮಹಜರ್ ನಲ್ಲಿ ನಾನು ನಮೂದು ಮಾಡಿರುವುದಿಲ್ಲ. ನಿಪಿ-5 ಎಂದು ಈಗಾಗಲೇ ಗುರುತಿಸಲಾದ 4 ಫೋಟೊಗಳನ್ನು ಚಾಸಾ-19 ರವರು ನಮ್ಮ ಇಲಾಖೆಗೆ ನೀಡಲಾದ ಕ್ಯಾಮರದ ಮೂಲಕ ತೆಗೆದಿದ್ದರು. ಆ ಬಗ್ಗೆ ನಿಪಿ-4 ಮಹಜರ್ ನಲ್ಲಿ ನಮೂದು ಇರುವುದಿಲ್ಲ. ನಿಪಿ-5 ರ 2 ನೇ ಫೋಟೊದಲ್ಲಿ ಕೋಲಾಗಲೀ, ದೊಣ್ಣೆಯಾಗಲೀ ಕಂಡು ಬರುತ್ತಿಲ್ಲ ಎಂದರೆ ಸರಿ. ನಿಪಿ-5 ಎಂದು ಗುರುತಿಸಲಾದ 4 ಫೋಟೊಗಳನ್ನು 1 ರಿಂದ ನಂತರ, 1 ರಂತೆ ತೆಗೆಯಲಾಗಿತ್ತು. ನಿಪಿ-4 ರ 1 ನೇ ಮತ್ತು 3 ನೇ ಫೋಟೊದಲ್ಲಿ ಕಾಣುವ ಕೋಲನ್ನು ಯಾರು ತಂದು ಇಟ್ಟರು ಎಂದು ನೀವು ನೋಡಿದ್ದೀರಾ ಎಂದರೆ ಸಾಕ್ಷಿ ಸದರಿ ಕೋಲು ಅಲ್ಲಿಯೇ ಇತ್ತು ಎನ್ನುತ್ತಾರೆ. ನಿಪಿ-5 ರ 2 ನೇ ಭಾವಚಿತ್ರದಲ್ಲಿ ಸದರಿ ಕೋಲು ಚಾಸಾ-1 ರವರ

ಕೈಯಲ್ಲಾಗಲೀ, ಪಂಚರ ಕೈಯಲ್ಲಾಗಲೀ ಕಾಣುತ್ತಿಲ್ಲ ಎಂದರೆ ಸದರಿ ಕೋಲು ಮಂಚದ ಸಂದಿಯಲ್ಲಿ ಇದ್ದ ಕಾರಣ ಕಾಣುತ್ತಿಲ್ಲ ಎನ್ನುತ್ತಾರೆ.

25. ನಿಪಿ-5 1 ನೇ ಫೋಟೊದಲ್ಲಿ ಮಂಚ, ಟಾರ್ಪಲ್ ಮತ್ತು ಗೋಡೆಯ ಸೈಡಿಗೆ ನೀರಿನ ಬಾಟಲ್ ಕಾಣುತ್ತದೆ. ನಿಪಿ-5 ರ 2 ನೇ ಫೋಟೊದಲ್ಲಿ ಕೂಡ ಮಂಚ, ಟಾರ್ಪಲ್ ಮತ್ತು ಗೋಡೆಯ ಸೈಡಿಗೆ ನೀರಿನ ಬಾಟಲ್ ಕಾಣುತ್ತದೆ.

26. ನಿಪಿ-13 ರಲ್ಲಿ ಘಟನೆ ನಡೆಯಿತು ಎನ್ನಲಾದ ಮನೆ ಯಾರ ಹೆಸರಿಗೂ ಮಂಜೂರಾಗಿಲ್ಲ ಎಂದು ನಮೂದು ಆಗಿರುತ್ತದೆ ಎಂದರೆ ಸರಿ.

27. ಸರ್ವೆ ನಂಬರ್ 38/1 ರ RTC ಯನ್ನು ನಾನು ಪಡೆದು ಕಡತಕ್ಕೆ ಅಳವಡಿಸಿರುವುದಿಲ್ಲ.

28. ನಿಪಿ-18 ರಲ್ಲಿ ದಿನಾಂಕ 18-07-2022 ರಂದು ಮಧ್ಯಾಹ್ನ 12.40 ಗಂಟೆಗೆ ಚಾಸಾ-1 ರವರು ಚಿಕಿತ್ಸೆ ಪಡೆದ ಬಗ್ಗೆ ನಮೂದು ಇರುತ್ತದೆ. ದೂರು ಸಲ್ಲಿಸಲು ಯಾಕೆ ವಿಳಂಬವಾಯಿತು ಎಂಬ ಬಗ್ಗೆ ದೂರಿನಲ್ಲಿ ವಿವರಣೆ ನೀಡಲಾಗಿರುತ್ತದೆ. ದಿನಾಂಕ 18-07-2022 ರಂದು ಫ್ರಾಸಾ-4 ಮತ್ತು ಫ್ರಾಸಾ-5 ರವರು ಊರಲ್ಲಿ ಇದ್ದ ಬಗ್ಗೆ ನಾನು ವಿಚಾರ ಮಾಡಿರುವುದಿಲ್ಲ. ನಾನು ಈ ಪ್ರಕರಣದಲ್ಲಿ ಯಾವುದೇ ಫೋಟೊಗಳನ್ನು ತೆಗೆಯದ ಕಾರಣ ಭಾರತೀಯ ಸಾಕ್ಷ್ಯಾಧಿನಿಯಮದ ಕಲಂ 65(ಬಿ) ರಡಿ ದೃಢೀಕರಣ ಪತ್ರವನ್ನು ನೀಡಲು ನನಗೆ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಿಪಿ-26 ರಲ್ಲಿ ಯಾವುದೇ ಸರ್ವೆ ನಂಬರ್ ಗಳ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ನಾನು ಈ ಪ್ರಕರಣದಲ್ಲಿ ಸರಿಯಾಗಿ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಮಹಜರ್ ಗಳನ್ನು ಮತ್ತು ಸಾಕ್ಷಿದಾರರುಗಳ ಹೇಳಿಕೆಗಳನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಠಾಣೆಯಲ್ಲಿಯೇ ಸೃಷ್ಟಿಸಿ ದೋಷಾರೋಪಣಾ ಪಟ್ಟಿಯೊಡನೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲು- **5** ನೇ ಆರೋಪಿ ಪರ ಶ್ರೀ ಪಿ.ಕೆ.ಎಂ. ವಕೀಲರಿಂದಃ</u>

29. ನಾನು ಈ ಪ್ರಕರಣದ ಕಡತವನ್ನು ಪಡೆದ ನಂತರ ದೂರನ್ನು ಓದಿ ನೋಡಿರುತ್ತೇನೆ. ನಿಪಿ-19 ದೂರಿನಲ್ಲಿ 5 ನೇ ಆರೋಪಿ ಸೊಂಟಕ್ಕೆ ದೊಣ್ಣೆಯಿಂದ ಹೊಡೆದಿರುತ್ತಾರೆ ಎಂದು ನಮೂದು ಇರುತ್ತದೆ. ನಿಪಿ-18 ಗಾಯದ ಪ್ರಮಾಣ ಪತ್ರದಲ್ಲಿ ಚಾಸಾ-1 ರವರ ಸೊಂಟಕ್ಕೆ ಯಾವುದೇ ಗಾಯ ಆದ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಿಪಿ-18 ರಲ್ಲಿ ನಮೂದಿಸಿದ 2 ನೇ ಗಾಯದಲ್ಲಿ ಸೊಂಟದ ಸುತ್ತಮುತ್ತ ನೋವಾದ ಬಗ್ಗೆ ನಮೂದು ಇರುತ್ತದೆ ಎನ್ನುತ್ತಾರೆ. ಆ ರೀತಿಯಾಗಿ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ.

30. ಯಾವುದೇ MLC ವರದಿ ಆಸ್ಪತ್ರೆಯಿಂದ ಠಾಣೆಗೆ ಬಂದಲ್ಲಿ ನಾನೇ ಸ್ವತಃ ಅಥವಾ ಸಿಬ್ಬಂದಿಯನ್ನು ಕಳುಹಿಸಿ ಗಾಯಾಳುವಿನ ಹೇಳಿಕೆಯನ್ನು ಮಾಡಿ ಸಂಜ್ಞೆಯ ಪ್ರಕರಣ ಎಂದು ಕಂಡು ಬಂದಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡಬೇಕು ಎಂದರೆ ಸರಿ.

31. ದಿನಾಂಕ 18-07-2022 ರಂದು ನಾನು ಠಾಣಾ ಪ್ರಭಾರದಲ್ಲಿ ಇದ್ದೆನೋ, ಇಲ್ಲವೋ ಎಂದು ನನಗೆ ಈಗ ನೆನಪಿಲ್ಲ. ಈ ಪ್ರಕರಣದಲ್ಲಿ ಪ್ರಥಮ ವರ್ತಮಾನ ವರದಿ ದಾಖಲಾಗುವ ಪೂರ್ವದಲ್ಲಿ 2 ನೇ ಆರೋಪಿ ನೀಡಿದ ದೂರಿನ ಮೇರೆಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ದೌರ್ಜನ್ಯ ತಡೆ ಅಧಿನಿಯಮದಡಿ ಅಪರಾಧ ಸಂಖ್ಯೆ: 57/2022 ರಂತೆ ಶನಿವಾರಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಸಾಕ್ಷಿ ಸ್ವತಃ ಸದರಿ ಪ್ರಕರಣ ಅದೇ ದಿನ ದಾಖಲಾಗಿತ್ತು ಎನ್ನುತ್ತಾರೆ. LPTN No.292/2022 ರ ಅರ್ಜಿಯನ್ನು ನಾನು ಓದಿದ್ದೆನೋ, ಇಲ್ಲವೋ ಎಂದು ನನಗೆ ಈಗ ನೆನಪಿಲ್ಲ. ಸದರಿ LPTN No.292/2022 ರ ಅರ್ಜಿದಾರರು ಈ ಪ್ರಕರಣದ ಚಾಸಾ-1 ರವರ ಗಂಡ ಎಂದರೆ ಸರಿ. LPTN No.292/2022 ಅರ್ಜಿಯನ್ನು ದಿನಾಂಕ 18-07-2022 ರಂದು ನೀಡಲಾಗಿತ್ತು. ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟ ಕೇಸ್ ಡೈರಿಯನ್ನು ಈ ದಿನ ನ್ಯಾಯಾಲಯಕ್ಕೆ ತಂದಿರುತ್ತೇನೆ. ಕೇಸ್ ಡೈರಿಯಲ್ಲಿ ಸದರಿ LPTN No.292/2022 ರ ಅರ್ಜಿಯ ಬಗ್ಗೆ ಉಲ್ಲೇಖ ಇರುವುದಿಲ್ಲ. ಸಾಕ್ಷಿ ಸ್ವತಃ ಆ ಬಗ್ಗೆ ನಿಪಿ-1 ರಲ್ಲಿ

ನಮೂದು ಇರುತ್ತದೆ ಎನ್ನುತ್ತಾರೆ. LPTN No.292/2022 ರ ಅರ್ಜಿಯಲ್ಲಿ ಈ ಪ್ರಕರಣದಲ್ಲಿನ ಆರೋಪಿತರುಗಳು ಚಾಸಾ-1 ರವರಿಗೆ ಹಲ್ಲೆ ಮಾಡಿದ ಬಗ್ಗೆಯಾಗಲೀ, ಫ್ರಾಸಾ-4 ರವರಿಂದ ರೂ.25,000/- ಹಣವನ್ನು ಕಸಿದುಕೊಂಡ ಬಗ್ಗೆ ಯಾವುದೇ ಉಲ್ಲೇಖ ಇಲ್ಲ ಎಂದರೆ ಸಾಕ್ಷಿ ನಾನು ಸದರಿ ಅರ್ಜಿಯನ್ನು ನೋಡಿಲ್ಲ ಎನ್ನುತ್ತಾರೆ. ಈ ಪ್ರಕರಣ ದಾಖಲಿಸುವ ಮುಂಚಿತವಾಗಿ 2 ನೇ ಆರೋಪಿ ಈ ಪ್ರಕರಣದ ಚಾಸಾ-1, ಫ್ರಾಸಾ-1, ಫ್ರಾಸಾ-4, ಮತ್ತು ಫ್ರಾಸಾ-5 ರವರ ಮೇಲೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ದೌರ್ಜನ್ಯ ತಡೆ ಅಧಿನಿಯಮದಡಿ ಅಪರಾಧ ಸಂಖ್ಯೆ 57/2022 ರಂತೆ ಶನಿವಾರಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕಣರ ದಾಖಲಿಸಿದ ಕಾರಣ ಈ ಸುಳ್ಳು ಪ್ರಕರಣವನ್ನು ದಾಖಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು LPTN No.292/2022 ರ ಅರ್ಜಿಯನ್ನು ಪರಿಶೀಲಿಸಿದ್ದಲ್ಲಿ ನನಗೆ ಈ ಪ್ರಕರಣ ಸುಳ್ಳು ಪ್ರಕರಣ ಎಂದು ಗೊತ್ತಾಗುತ್ತಿತ್ತು ಮತ್ತು ನಾನು ಸದರಿ ಅರ್ಜಿಯನ್ನು ಪರಿಶೀಲಿಸದೆ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ-1 3 ಇಂಚು ದಪ್ಪದ ದೊಣ್ಣೆ ಅಲ್ಲ ಎಂದರೆ ಸಾಕ್ಷಿ ಅದು ಒಣಗಿದ ಕಾರಣ ಸಣ್ಣ ಆಗಿರುತ್ತದೆ ಎನ್ನುತ್ತಾರೆ. ಮು.ಮಾ-1 ನ್ನು ಈ ಪ್ರಕರಣಕೋಸ್ಕರ ದುರುದ್ದೇಶ ಪೂರ್ವಕವಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. 5 ನೇ ಆರೋಪಿಗೂ, ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದೆ ಇದ್ದರೂ 5 ನೇ ಆರೋಪಿಯನ್ನು ಸೇರಿಸಿ ನಾನು ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಪಾಟೀಸವಾಲು**- 1** ರಿಂದ **4** ನೇ ಆರೋಪಿತರ ಪರ ಶ್ರೀ ಸಿ.ಎಸ್.ಪಿ. ವಕೀಲರು ಈ ಮೇಲಿನ ಶ್ರೀ.ಡಿ.ಡಿ.ಸಿ ಮತ್ತು ಶ್ರೀ.ಪಿ.ಕೆ.ಎಂ ವಕೀಲರುಗಳು ಮಾಡಿದ ಪಾಟೀಸವಾಲುಗಳನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.
ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ.